## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1808 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24..03.2020 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಷ್ಟು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ; ಈ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | **<u>ಪೌರಾಡಳಿತ ನಿರ್ದೇಶನಾಲಯದ ವತಿಯಿಂದ:</u>**<br>ತುಮಕೂರು, ವಿಜಯಪುರ, ಕಲಬುರಗಿ ಮತ್ತು ಬಳ್ಳಾರಿ ಮಹಾನಗರ ಪಾಲಿಕೆಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, ಇದನ್ನು ಬಗೆಹರಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ 45 ಎಸ್.ಎಫ್.ಸಿ 2020, ದಿನಾಂಕ: 10-03-2020ರಲ್ಲಿ ಅನುದಾನವನ್ನು ಬಿಡುಗಡೆಗೊಳಿಸಿದೆ.<br>ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರನ್ನು ಪೂರೈಸಲು ಪೌರಾಡಳಿತ ನಿರ್ದೇಶನಾಲಯದಿಂದ ಅನುಷ್ಠಾನಗೊಳಿಸ ಲಾಗುತ್ತಿರುವ ಯೋಜನೆಗಳು ಕೆಳಕಂಡಂತಿವೆ:<br>• ಎಸ್.ಎಫ್.ಸಿ ಕುಡಿಯುವ ನೀರು ಯೋಜನೆ<br>• ನಗರೋತ್ಥಾನ ಯೋಜನೆ<br>• 14ನೇ ಹಣಕಾಸು ಯೋಜನೆ<br>ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರನ್ನು ಪೂರೈಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ವತಿಯಿಂದ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಕೇಂದ್ರ ಪುರಸ್ಕೃತ ಅಮೃತ್ ಯೋಜನೆ<br>• ನಗರ ನೀರು ಸರಬರಾಜು ಯೋಜನೆ.<br>• ಕರ್ನಾಟಕ ನಗರ ನೀರು ಸರಬರಾಜು ಮತ್ತು ಆಧುನೀಕರಣ ಯೋಜನೆ ಪಟ್ಟಣಗಳಿಗೆ ನೀರು ಪೂರೈಕೆ ಅನುಷ್ಠಾನ.<br>**<u>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ:</u>**<br>ರಾಜ್ಯದಲ್ಲಿ 1)ಕಲಬುರಗಿ 2)ಹುಬ್ಬಳ್ಳಿ-ಧಾರವಾಡ 3)ವಿಜಯಪುರ 4)ಶಿವಮೊಗ್ಗ 5)ಬೆಳಗಾವಿ ಮಹಾನಗರ ಪಾಲಿಕೆಗಳ ನೀರು ಸರಬರಾಜು ವ್ಯವಸ್ಥೆಯನ್ನು ಮಂಡಳಿ ವತಿಯಿಂದ ನಿರ್ವಹಿಸಲಾಗುತ್ತಿದೆ. ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ.<br>ಕುಡಿಯುವ ನೀರನ್ನು ಪೂರೈಸಲು ಕೆಳಕಂಡ ಯೋಜನೆಗಳು ಇರುತ್ತವೆ.<br><u>1. ಕಲಬುರಗಿ ಮಹಾನಗರ ಪಾಲಿಕೆ:</u><br>ಕಲಬುರಗಿ ನಗರದ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ |

ಒದಗಿಸಲು, ಬೆಣ್ಣೆತೋರಾ ಅಣೆಕಟ್ಟನ್ನು ಮೂಲವಾಗಿಟ್ಟುಕೊಂಡು, ನಗರದ ಎಲ್ಲಾ ಪ್ರದೇಶಗಳಿಗೆ ನಿರಂತರ ನೀರು ಸರಬರಾಜು ಮಾಡುವ ಯೋಜನೆಯನ್ನು ಕೆ.ಯು.ಐ.ಡಿ.ಎಫ್.ಸಿ ಇಲಾಖೆಯು ವಿಶ್ವ ಬ್ಯಾಂಕ್ ನೆರವಿನಲ್ಲಿ ಕೈಗೆತ್ತಿಕೊಂಡಿದೆ.

<u>2. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ:</u>

ಮಹಾನಗರ ಪಾಲಿಕೆಯ ಠೇವಣಿ ಕೊಡುಗೆಯಡಿ ಮಂಡಳಿ ವತಿಯಿಂದ ರೂ.26.00 ಕೋಟಿಗಳ ಮಲಪ್ರಭಾ ಸಗಟು ನೀರು ಸರಬರಾಜು ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡು ದಿನಾಂಕ: 08-02-2020 ರಲ್ಲಿ ಚಾಲನೆಗೊಳಿಸಲಾಗಿದೆ.

ಪ್ರಸ್ತುತ ಪಾಲಿಕೆ ವ್ಯಾಪ್ತಿಯಲ್ಲಿ ನೀರು ಸರಬರಾಜು ಅಭಿವೃದ್ಧಿ ಯೋಜನೆಗಳನ್ನು ಕೆ.ಯು.ಐ.ಡಿ.ಎಫ್.ಸಿ. ಇಲಾಖೆಯು ವಿಶ್ವ ಬ್ಯಾಂಕ್ ನೆರವಿನಲ್ಲಿ ಕೈಗೆತ್ತಿಕೊಂಡಿದೆ.

<u>3. ವಿಜಯಪುರ ಮಹಾನಗರ ಪಾಲಿಕೆ:</u>

1. ಅಮೃತ ಯೋಜನೆಯ ಮೂಲ ಅನುದಾನದಡಿ ವಿಜಯಪುರ ನಗರದಲ್ಲಿ ಬರುವ 15 ಝೋನ್‌ಗಳಿಗೆ ನಿರಂತರ ಒತ್ತಡಯುಕ್ತ ನೀರು ಸರಬರಾಜು ಒದಗಿಸುವ ರೂ. 156 ಕೋಟಿಗಳ ಅಂದಾಜು ವೆಚ್ಚದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
2. ಅಮೃತ ಯೋಜನೆಯ ಹೆಚ್ಚುವರಿ ಅನುದಾನದಡಿ, ವಿಜಯಪುರ ನಗರದಲ್ಲಿ ಬರುವ 2 ಝೋನ್‌ಗಳಿಗೆ ನಿರಂತರ ಒತ್ತಡಯುಕ್ತ ನೀರು ಸರಬರಾಜು ಮಾಡುವ ರೂ.21.98 ಕೋಟಿಗಳ ಅಂದಾಜು ವೆಚ್ಚದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
3. ನಗರೋತ್ಥಾನ 3ನೇ ಹಂತದ ಯೋಜನೆಯಡಿ, (ಠೇವಣಿ ಕೊಡುಗೆ ಕಾಮಗಾರಿ) ವಿಜಯಪುರ ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಣೆಗೊಳಿಸಲು ಭೂತನಾಳ ಕೆರೆಯಲ್ಲಿ ಹೆಚ್ಚುವರಿಯಾಗಿ 10 ದಶಲಕ್ಷ ಲೀಟರ್ ಜಲಶುದ್ಧೀಕರಣ ಘಟಕವನ್ನು ನಿರ್ಮಿಸುವ ಕಾಮಗಾರಿಯನ್ನು ರೂ. 15.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಂಡಿದ್ದು ಪ್ರಗತಿಯಲ್ಲಿರುತ್ತದೆ.
4. ವಿಜಯಪುರ ನಗರಕ್ಕೆ ಕೃಷ್ಣಾ ನದಿಯಿಂದ (ಆಲಮಟ್ಟಿ ಜಲಾಶಯದ ಹಿನ್ನೀರು) ನೀರು ಸರಬರಾಜು ಮಾಡುವ 2ನೇ ಹಂತದ ನೀರು ಸರಬರಾಜು ವ್ಯವಸ್ಥೆಯ ಸಗಟು ನೀರು ಸರಬರಾಜನ್ನು ಅಭಿವೃದ್ಧಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

<u>4. ಶಿವಮೊಗ್ಗ ಮಹಾನಗರ ಪಾಲಿಕೆ:</u>

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶಾಶ್ವತವಾಗಿ ಕುಡಿಯುವ ನೀರಿನ ಅಭಾವ ಪರಿಹರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಶಿವಮೊಗ್ಗ ನಗರದ ನವೀಕೃತ ವಿಸ್ತರಣಾ ಜಾಲದ ಯೋಜನೆಯನ್ನು ರೂ. 60.65 ಕೋಟಿಗಳ ಅಂದಾಜು ಮೊತ್ತದಲ್ಲಿ

ಕೈಗೊಂಡಿದ್ದು ಪ್ರಗತಿಯಲ್ಲಿರುತ್ತದೆ.

2. ಶಿವಮೊಗ್ಗ ನಗರದ ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿ ಪಡಿಸಲು ಗಾಜನೂರು ಹೆಡ್ ವರ್ಕ್ಸ್‌ನಿಂದ ಕೆ.ಆರ್.ವಾಟರ್ ವರ್ಕ್ಸ್‌ವರೆಗೆ 1067 ಮಿ.ಮೀ ವ್ಯಾಸದ ಎಂ.ಎಸ್. ಗ್ರ್ಯಾವಿಟಿ ಕೊಳವೇ ಮಾರ್ಗ ಅಳವಡಿಸುವ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಕೆ.ಆರ್. ವಾಟರ್ ವರ್ಕ್ಸ್‌ನಲ್ಲಿ ಹಳೇ ಪಂಪಿಂಗ್ ಮಿಷನರಿ ಬದಲಾವಣೆ ಮತ್ತು ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅಂದಾಜು ಮೊತ್ತ ರೂ. 44.40 ಕೋಟಿಗಳು.
3. ಶಿವಮೊಗ್ಗ ನಗರದಲ್ಲಿ ನಿರಂತರ 24/7 ನೀರು ಸರಬರಾಜು ವಿತರಣಾ ಯೋಜನೆಯನ್ನು ರೂ. 104.90 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಂಡಿದ್ದು, ಪ್ರಗತಿಯಲ್ಲಿರುತ್ತದೆ.

<u>5. ಬೆಳಗಾವಿ ಮಹಾನಗರ ಪಾಲಿಕೆ:</u>

ಪ್ರಸ್ತುತ ಬೆಳಗಾವಿ ನಗರದ ಎಲ್ಲ ವಾರ್ಡುಗಳಲ್ಲಿ 24/7 ನಿರಂತರ ನೀರು ಸರಬರಾಜು ಮಾಡುವ ವಿಶ್ವ ಬ್ಯಾಂಕ್ ನೆರವಿನ ಯೋಜನೆಯನ್ನು ಕೆ.ಯು.ಐ.ಡಿ.ಎಫ್.ಸಿ ಇಲಾಖೆಯು ಕೈಗೆತ್ತಿಕೊಂಡಿದೆ.

<u>6 . ಮೈಸೂರು ಮಹಾನಗರ ಪಾಲಿಕೆ:</u>

ಮೈಸೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರು ಸರಬರಾಜು ಅಭಿವೃದ್ಧಿ ಪಡಿಸಲು ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಜೆ.ಎನ್.ನರ್ಮ್ ಪರಿವರ್ತನಾ ಹಂತದಡಿ ಮೈಸೂರು ನಗರಕ್ಕೆ ನಿರಂತರ ನೀರು ಸರಬರಾಜು ಕಾಮಗಾರಿ ವೆಚ್ಚ ರೂ.213.99 ಕೋಟಿಗಳು ಪ್ರಗತಿಯಲ್ಲಿರುತ್ತದೆ.
2. ಅಮೃತ್ ಯೋಜನೆಯಡಿ ಮೈಸೂರು ನಗರಕ್ಕೆ ಸಗಟು ನೀರು ಸರಬರಾಜು ಮಾಡುವ ಕಾಮಗಾರಿ ವೆಚ್ಚ ರೂ. 156.00 ಕೋಟಿಗಳು ಪ್ರಗತಿಯಲ್ಲಿರುತ್ತದೆ.
3. ಹಳೇ ಉಂಡವಾಡಿ ಗ್ರಾಮದ ಬಳಿ ಕಾವೇರಿ ನದಿ ಮೂಲದಿಂದ ಮೈಸೂರು ನಗರ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಗಡೆ ಇರುವ 92 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯ ಅಂದಾಜು ವೆಚ್ಚ ರೂ.350.00 ಕೋಟಿಗಳಿಗೆ ಅನುಮೋದನೆಯಾಗಿದ್ದು ಪ್ರಸ್ತುತ ಈ ಯೋಜನೆಗೆ ಅವಶ್ಯಕವಿರುವ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

<u>7. ಮಂಗಳೂರು ಮಹಾನಗರ ಪಾಲಿಕೆ:</u>

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನೀರು ಸರಬರಾಜು ಯೋಜನೆಗಳನ್ನು ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆ ವತಿಯಿಂದ ಕೈಗೊಳ್ಳಲಾಗಿದೆ.

<u>8. ಬಳ್ಳಾರಿ ಮಹಾನಗರ ಪಾಲಿಕೆ:</u>

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ವತಿಯಿಂದ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ನೀರು ಸರಬರಾಜು ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ರೂ.7070 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯಡಿ ಮೋಕಾ ಜಲಶುದ್ಧೀಕರಣ ಘಟಕದಲ್ಲಿ ಪಂಪ್‌ಹೌಸ್, 813 ಮಿ.ಮೀ ವ್ಯಾಸದ ರೈಸಿಂಗ್ ಮೇನ್, ಮೋಕಾ ಮತ್ತು ಅಲ್ಲೀಪುರ ಕೆರೆಗಳ ಪುನಶ್ಚೇತನ ಕಾಮಗಾರಿ, ಅಲ್ಲೀಪುರದಲ್ಲಿ ಆರ್.ಸಿ.ಸಿ ಇನ್‌ಟೇಕ್ ವೆಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಪ್ರಸ್ತುತ ಮೋಕಾ ಹತ್ತಿರ 800 ಮಿಲಿಯನ್ ಲೀಟರ್ ಸಾಮರ್ಥ್ಯದ ಹೊಸ ಕೆರೆ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ.

ಬಳ್ಳಾರಿ ನಗರಕ್ಕೆ ಕುಡಿಯುವ ನೀರು ಪೂರೈಸಲು ಎರಡು ಯೋಜನೆಗಳನ್ನು ತಯಾರಿಸಲಾಗುತ್ತಿದೆ.

1) ಬಳ್ಳಾರಿ ನಗರಕ್ಕೆ 5 ಕಿ.ಮೀ ದೂರದಲ್ಲಿರುವ ಕೊಳಗಲ್ಲು ಕೆರೆಯಿಂದ ಹೆಚ್ಚುವರಿ ನೀರು ಸರಬರಾಜು ಮಾಡುವ ಅಂದಾಜು ಪಟ್ಟಿಯನ್ನು ತಯಾರಿಸಲು ಸರ್ವೆ ಕಾರ್ಯಕ್ಕಾಗಿ ಜಿಲ್ಲಾ ಖನಿಜ ನಿಧಿ ಅಡಿಯಲ್ಲಿ ಟೆಂಡರ್ ಕರೆಯಲಾಗಿದೆ.
2) ಬಳ್ಳಾರಿ ನಗರಕ್ಕೆ 70 ಕಿ.ಮೀ ದೂರದಲ್ಲಿರುವ ತುಂಗಭದ್ರಾ ಅಣೆಕಟ್ಟಿನಿಂದ ನೀರು ಸರಬರಾಜು ಮಾಡಲು ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆ.

<u>9. ತುಮಕೂರು ಮಹಾನಗರ ಪಾಲಿಕೆ:</u>

ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶಾಶ್ವತವಾಗಿ ಕುಡಿಯುವ ನೀರಿನ ಅಭಾವ ಪರಿಹರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ತುಮಕೂರು ನಗರಕ್ಕೆ ಯು.ಐ.ಡಿ.ಎಸ್.ಎಸ್.ಎಂ.ಟಿ. ಯೋಜನೆಯಡಿ ನಿರಂತರ ನೀರು ಸರಬರಾಜು ಯೋಜನೆಯನ್ನು ರೂ. 104.90 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.
2. ತುಮಕೂರು ನಗರಕ್ಕೆ ಅಮೃತ್ ಯೋಜನೆಯಡಿ ನೀರು ಸರಬರಾಜು ಸುಧಾರಣೆ ಯೋಜನೆಯನ್ನು ಒಟ್ಟು ರೂ. 102.88 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.
3. ತುಮಕೂರು ನಗರದ ಕುಡಿಯುವ ನೀರು ಸರಬರಾಜು ಸುಧಾರಣೆಗೆ ತುಮಕೂರು ಸ್ಮಾರ್ಟ್ ಸಿಟಿ ನಿಯಮಿತದ ಠೇವಣಿ ಕೊಡುಗೆ ಯೋಜನೆಯಡಿ ರೂ. 56.55 ಕೋಟಿಗಳ ಅಂದಾಜು ಮೊತ್ತದಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

<u>10. ದಾವಣಗೆರೆ ಮಹಾನಗರ ಪಾಲಿಕೆ:-</u>

ದಾವಣಗೆರೆ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನೀರು ಸರಬರಾಜು ಯೋಜನೆಗಳನ್ನು ಕೆ.ಯು.ಐ.ಡಿ.ಎಫ್.ಸಿ ಸಂಸ್ಥೆ ವತಿಯಿಂದ ಕೈಗೊಳ್ಳಲಾಗಿದೆ.

ಎ.ಡಿ.ಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ

| | | |
|---|---|---|
| | | ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ಎ.ಡಿ.ಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಕಾರ್ಯಕ್ರಮ (ಎನ್‌ಕೆಯುಎಸ್‌ಐಪಿ) ಅಡಿಯಲ್ಲಿ ಬರುವ ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಗಟು ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಹಾಲಿ ಕುಡಿಯುವ ನೀರಿನ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ಬಳ್ಳಾರಿ ಮಹಾನಗರ ಪಾಲಿಕೆ ನಿರ್ವಹಿಸುತ್ತಿದೆ.<br><br>ಎನ್‌ಕೆಯುಎಸ್‌ಐಪಿ ಯೋಜನೆಯಡಿ 24/7 ನೀರು ಸರಬರಾಜು ಕಾಮಗಾರಿ ಚಾಲ್ತಿಯಲ್ಲಿದ್ದು, ಶೇ.65 ಕಾಮಗಾರಿ ಪೂರ್ಣಗೊಂಡಿರುತ್ತದೆ. ಕಾಮಗಾರಿ ಪೂರ್ಣಗೊಂಡ ನಂತರ ಬಳಕೆದಾರರಿಗೆ ಸರ್ಮಪಕವಾಗಿ ನೀರನ್ನು ಸರಬರಾಜು ಮಾಡುವ ಗುರಿ ಹೊಂದಲಾಗಿದೆ.<br><br>**ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ ವತಿಯಿಂದ:**<br><br>ಎಡಿಬಿ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮದಡಿಯಲ್ಲಿ (ಕೆಐಯುಡಬ್ಲ್ಯೂ.ಎಂಐಪಿ):-<br><br>ಎಡಿಬಿ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮದಡಿಯಲ್ಲಿ (ಕೆಐಯುಡಬ್ಲ್ಯೂ.ಎಂಐಪಿ) ರಾಜ್ಯದ 8 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸದರಿ ಕಾರ್ಯಕ್ರಮದಡಿಯಲ್ಲಿ 2 ಮಹಾನಗರ ಪಾಲಿಕೆಗಳಾದ ದಾವಣಗೆರೆ ಮತ್ತು ಮಂಗಳೂರು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ದಾವಣಗೆರೆಯಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು ಮೆ/ ಸೂಯೆಜ್ ಪ್ರೈ.ಲಿ. ಇವರಿಗೆ ರೂ. 677.96 ಕೋಟಿಗಳಿಗೆ (8 ವರ್ಷಗಳ ನಿರ್ವಹಣೆಯೊಂದಿಗೆ) ದಿನಾಂಕ: 18.05.2018 ರಂದು ಗುತ್ತಿಗೆ ನೀಡಲಾಗಿದ್ದು, ಭೌತಿಕವಾಗಿ ಶೇ. 45.86% ಮತ್ತು ಆರ್ಥಿಕವಾಗಿ ಶೇ.42.45% ರಷ್ಟು ಪ್ರಗತಿಯನ್ನು ಸಾಧಿಸಲಾಗಿರುತ್ತದೆ.<br><br>ಮಂಗಳೂರಿನಲ್ಲಿ 24/7 ಕುಡಿಯುವ ನೀರಿನ ಕಾಮಗಾರಿಯನ್ನು ಮೆ: ಸೂಯಜ್ ಪ್ರಜೆಕ್ಟ್ ಪ್ರೈ.ಲಿ- ಸೂಯಜ್ ಇಂಡಿಯಾ ಪ್ರೈ.ಲಿ- ಡಿ.ಆರ್.ಎಸ್ ಇನ್ಫ್ರಾಟೆಕ್ ಪ್ರೈ.ಲಿ(ಜೆ.ವಿ) ಇವರಿಗೆ ರೂ. 792.42 ಕೋಟಿಗಳಿಗೆ (8 ವರ್ಷಗಳ ನಿರ್ವಹಣೆಯೊಂದಿಗೆ) ದಿನಾಂಕ: 24.12.2019 ರಂದು ಗುತ್ತಿಗೆ ನೀಡಲಾಗಿದ್ದು, ವಿನ್ಯಾಸ ಪರಾಮರ್ಶೆ (Design validation) ಕಾರ್ಯವು ಪ್ರಗತಿಯಲ್ಲಿದ್ದು, ಆರ್ಥಿಕವಾಗಿ ಶೇ. 8.8% ರಷ್ಟು ಪ್ರಗತಿಯನ್ನು ಸಾಧಿಸಲಾಗಿರುತ್ತದೆ.<br><br>ವಿಶ್ವ ಬ್ಯಾಂಕ್ ನೆರವಿನ “ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ” (ಕೆಯುಡಬ್ಲ್ಯೂಎಸ್‌ಎಂಪಿ) ವಿಶ್ವ ಬ್ಯಾಂಕ್ ನೆರವಿನ “ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ” (ಕೆಯುಡಬ್ಲ್ಯೂಎಸ್‌ಎಂಪಿ) ಯಲ್ಲಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ ಮತ್ತು ನಿರ್ವಹಣೆ-ವರ್ಗಾವಣೆ (DBOT) ಮಾದರಿಯಲ್ಲಿ ಪರಿಣಾಮಕಾರಿ ವೆಚ್ಚದೊಳಗೆ ನಿರಂತರ (24/7) |

<table>
<tr>
<td></td>
<td></td>
<td>ಒತ್ತಡ ಸಹಿತ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.<br><br>ಈ ಯೋಜನೆಗಳನ್ನು 5 ವರ್ಷಗಳ ವಿನ್ಯಾಸ, ನಿರ್ಮಾಣ, ನಿರ್ವಹಣೆ ಅವಧಿ ಮತ್ತು 7 ವರ್ಷಗಳ ಪೋಷಣಾ ಅವಧಿ ಸೇರಿದಂತೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.</td>
</tr>
<tr>
<td>ಆ)</td>
<td>ಕಳೆದ 5 ವರ್ಷಗಳಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಸಲುವಾಗಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ;</td>
<td>ಪೌರಾಡಳಿತ ನಿರ್ದೇಶನಾಲಯದ ವತಿಯಿಂದ:<br>ಮಹಾನಗರಪಾಲಿಕೆಗಳಲ್ಲಿ ಕಳೆದ 5 ವರ್ಷಗಳಿಂದ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಸಲುವಾಗಿ ಬಾವಿಗಳನ್ನು ಕೊರೆಯಿಸಿರುವ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಮಹಾನಗರ ಪಾಲಿಕೆಯ ಹೆಸರು</th><th>ಕೊರೆಯಿಸಿರುವ ಕೊಳವೆ ಬಾವಿಗಳ ಸಂಖ್ಯೆ</th></tr>
<tr><td>1</td><td>ತುಮಕೂರು</td><td>301</td></tr>
<tr><td>2</td><td>ವಿಜಯಪುರ</td><td>97</td></tr>
<tr><td>3</td><td>ಬೆಳಗಾವಿ</td><td>396</td></tr>
<tr><td>4</td><td>ಮೈಸೂರು</td><td>45</td></tr>
<tr><td>5</td><td>ಶಿವಮೊಗ್ಗ</td><td>47</td></tr>
<tr><td>6</td><td>ದಾವಣಗೆರೆ</td><td>370</td></tr>
<tr><td>7</td><td>ಕಲಬುರಗಿ</td><td>334</td></tr>
<tr><td>8</td><td>ಹುಬ್ಬಳ್ಳಿ-ಧಾರವಾಢ</td><td>444</td></tr>
<tr><td>9</td><td>ಬಳ್ಳಾರಿ</td><td>172</td></tr>
<tr><td>10</td><td>ಮಂಗಳೂರು</td><td>78</td></tr>
<tr><td colspan="2">ಒಟ್ಟು</td><td>2284</td></tr>
</table>
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ:<br>ಕಳೆದ 5 ವರ್ಷಗಳಲ್ಲಿ ಸದರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅನುದಾನದಡಿ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಸಲುವಾಗಿ ಕೊರೆಯಲಾದ ಕೊಳವೆ ಬಾವಿಗಳ ವಿವರ ಈ ಕೆಳಗಿನಂತಿವೆ:
<table>
<tr><th>ಕ್ರ. ಸಂ.</th><th>ಮಹಾನಗರ ಪಾಲಿಕೆಯ ಹೆಸರು</th><th>ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ</th></tr>
<tr><td>1</td><td>ಕಲಬುರಗಿ ನಗರ</td><td>334</td></tr>
<tr><td>2</td><td>ಹುಬ್ಬಳ್ಳಿ-ಧಾರವಾಡ</td><td>580</td></tr>
<tr><td>3</td><td>ವಿಜಯಪುರ</td><td>97</td></tr>
<tr><td>4</td><td>ಶಿವಮೊಗ್ಗ</td><td>47</td></tr>
<tr><td>5</td><td>ಬೆಳಗಾವಿ</td><td>396</td></tr>
<tr><td>6</td><td>ಬಳ್ಳಾರಿ</td><td>17</td></tr>
<tr><td>7</td><td>ತುಮಕೂರು</td><td>15</td></tr>
</table></td>
</tr>
<tr>
<td>ಇ)</td>
<td>ಸ್ಮಾರ್ಟ್‌ಸಿಟಿ ಯೋಜನೆಯಲ್ಲಿ ಮಹಾನಗರ ಪಾಲಿಕೆ</td>
<td>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ:</td>
</tr>
</table>

| | | |
|---|---|---|
| | ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | **ತುಮಕೂರು:**<br><br>ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್‌ನ ರೇವಣಿ ಕೊಡುಗೆ ಕಾಮಗಾರಿಯಡಿ ತುಮಕೂರು ನಗರ ನೀರು ಸರಬರಾಜು ಅಭಿವೃದ್ಧಿ ಪಡಿಸಲು ತುಮಕೂರು ಬುಗುಡನಹಳ್ಳಿ ಕೆರೆಯಿಂದ ಹೇಮಾವತಿ ನಾಲೆಯ ನೀರನ್ನು ಅಮಾನಿಕೆರೆಗೆ ತುಂಬಿಸುವ ಮತ್ತು ಅಮಾನಿಕೆರೆಯಿಂದ ಪಿ.ಎನ್ ಪಾಳ್ಯದಲ್ಲಿರುವ ಜಲಶುದ್ದೀಕರಣ ಘಟಕಕ್ಕೆ ನೀರನ್ನು ಪಂಪ್ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.56.55 ಕೋಟಿಗಳಿಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ಕಾಮಗಾರಿಯನ್ನು ಎರಡು ಪ್ಯಾಕೇಜ್ ಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ.<br><br>ಪ್ಯಾಕೇಜ್-1: ಅಂದಾಜು ಮೊತ್ತ ರೂ.31.00 ಕೋಟಿ (ತುಮಕೂರು ಬುಗುಡನಹಳ್ಳಿ ಕೆರೆಯಿಂದ ಹೇಮಾವತಿ ನಾಲೆಯ ನೀರನ್ನು ಅಮಾನಿಕೆರೆಗೆ ತುಂಬಿಸುವ ಕಾಮಗಾರಿ)<br>ಪ್ಯಾಕೇಜ್-2:ಅಂದಾಜು ಮೊತ್ತ ರೂ.25.55 ಕೋಟಿ (ಅಮಾನಿಕೆರೆಯಲ್ಲಿ ಸಂಗ್ರಹಿಸುವ ನೀರನ್ನು ಕುಡಿಯುವ ನೀರಿನ ಬಳಕೆಗಾಗಿ ಶುದ್ದೀಕರಿಸಲು ಪಿ.ಎನ್ ಪಾಳ್ಯದಲ್ಲಿರುವ 50.00 ಎಂ.ಎಲ್.ಡಿ ಸಾಮರ್ಥ್ಯದ ಜಲಶುದ್ದೀಕರಣ ಘಟಕಕ್ಕೆ ಪಂಪು ಮಾಡುವ ಕಾಮಗಾರಿ)<br><br>ಈವರೆಗೆ ಆಗಿರುವ ವೆಚ್ಚ ರೂ.21.25 ಕೋಟಿಗಳು.<br><br>**ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ ವತಿಯಿಂದ:**<br><br>ಸ್ಮಾರ್ಟ್ ಸಿಟಿ ಯೋಜನೆಯಡಿ ಆಯ್ಕೆಯಾಗಿರುವ ನಗರಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಪ್ರಸ್ತಾಪಿಸಲಾಗಿರುವುದಿಲ್ಲ.<br><br>ಮುಂದುವರೆದು, ಮಂಗಳೂರು ನಗರದಲ್ಲಿ ಏಶಿಯನ್ ಅಭಿವೃದ್ಧಿ ಬ್ಯಾಂಕ್ ಸಹಾಯದಿಂದ 24/7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಕೆಯುಐಡಿಎಫ್‌ಸಿ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಗೆ ಪೂರಕವಾಗಿ ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ರೂ. 114 ಕೋಟಿ ಅನುದಾನವನ್ನು Convergence fund ಅಡಿಯಲ್ಲಿ ಒದಗಿಸಲು ತೀರ್ಮಾನಿಸಲಾಗಿದೆ. |

ಸಂಖ್ಯೆ: ನಅಇ 55 ಎಂಎನ್‌ಇ 2020(ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು